# ಸಾಧುಸಂಗ



✸ ಒಬ್ಬ ಭಕ್ತ: ''ಮಹಾಶಯರೆ, ಹಾಗಾದರೆ ಪ್ರಾಪಂಚಿಕ ಜೀವರ ಉದ್ಧಾರಕ್ಕೆ ಯಾವ ಮಾರ್ಗವೂ ಇಲ್ಲವೆ?''

ಶ್ರೀರಾಮಕೃಷ್ಣರು: ''ನಿಶ್ಚಯವಾಗಿ ಇದೆ. ಆಗಾಗ ಸಾಧುಸಂಗ, ಆಗಾಗ ನಿರ್ಜನ ಪ್ರದೇಶದಲ್ಲಿ ಭಗವಚ್ಚಿಂತನೆ ಮಾಡುತ್ತಿರಬೇಕು. ಆತನನ್ನು ಪ್ರಾರ್ಥಿಸಬೇಕು: 'ನನಗೆ ಶ್ರದ್ಧಾಭಕ್ತಿ ಕೊಡು' ಎಂಬುದಾಗಿ. ಶ್ರದ್ಧೆಯುಂಟಾಗಿಬಿಟ್ಟಿತು ಎಂದರೆ ಎಲ್ಲವೂ ದೊರೆತ ಹಾಗೆ. ಶ್ರದ್ಧೆಗಿಂತ ಮಿಗಿಲಾದ್ದು ಯಾವುದೂ ಇಲ್ಲ.''

✸ ಒಬ್ಬ ಭಕ್ತ : ''ಹಾಗಾದರೆ ಉಪಾಯ?''

ಶ್ರೀರಾಮಕೃಷ್ಣರು : ''ಸಾಧುಸಂಗ ಮತ್ತು ಪ್ರಾರ್ಥನೆ. ವೈದ್ಯನ ಹತ್ತಿರಕ್ಕೆ ಹೋಗದೆ ಇದ್ದರೆ ರೋಗ ಗುಣವಾಗುವುದಿಲ್ಲ. ಸಾಧುಸಂಗವನ್ನು ಎಲ್ಲೋ ಒಂದು ದಿನ ಮಾಡಿಬಿಟ್ಟರೆ ಸಾಲದು, ಅದು ಸರ್ವದಾ ಆವಶ್ಯಕ; ರೋಗ ತಗುಲಿಕೊಂಡೇ ಇದೆ. ವೈದ್ಯನ ಸಹವಾಸ ಮಾಡದೆ ಇದ್ದರೆ, ನಾಡಿ-ಜ್ಞಾನ ದೊರಕದು; ಒಟ್ಟಿಗೇ ಸುತ್ತಾಡಿಕೊಂಡಿರಬೇಕಾಗುತ್ತದೆ. ಆಗ ಅರಿತುಕೊಳ್ಳಬಹುದು, ಯಾವುದು ಕಫದ ನಾಡಿ, ಯಾವುದು ಪಿತ್ತದ ನಾಡಿ ಎಂಬುದನ್ನು.''

ಭಕ್ತ: ''ಸಾಧುಸಂಗದಿಂದ ಆಗುವ ಉಪಕಾರವೇನು?''

ಶ್ರೀರಾಮಕೃಷ್ಣರು: ''ಭಗವಂತನಲ್ಲಿ ಅನುರಾಗ ಹುಟ್ಟಿಸುತ್ತದೆ; ಆತನನ್ನು ಪ್ರೀತಿಸುವಂತೆ ಮಾಡುತ್ತದೆ. ವ್ಯಾಕುಲತೆ ಉಂಟಾಗದಿದ್ದರೆ ಏನೂ ದೊರಕದು. ಸಾಧುಸಂಗ ಮಾಡುತ್ತ ಮಾಡುತ್ತ ಭಗವಂತನಿಗಾಗಿ ಪ್ರಾಣ ವ್ಯಾಕುಲಪಡಲಾರಂಭಿಸುತ್ತದೆ. ಮನೆಯಲ್ಲಿ ಯಾರಿಗಾದರೂ ಅಸೌಖ್ಯವಾದರೆ ಆತನನ್ನು ಗುಣಪಡಿಸುವುದು ಹೇಗೆ ಎಂಬುದಾಗಿ ಸರ್ವದಾ ಮನಸ್ಸು ವ್ಯಾಕುಲಪಡುತ್ತಾ ಇರುತ್ತದೆಯಲ್ಲಾ ಹಾಗೆ. ಕೆಲಸ ಕಳೆದುಕೊಂಡ ವ್ಯಕ್ತಿ ಯಾವ ರೀತಿ ವ್ಯಾಕುಲತೆಯಿಂದ ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೆ ಅಲೆಯುತ್ತಾ ಇರುತ್ತಾನೊ ಹಾಗೆ. ಇವೊತ್ತು ಯಾವುದಾದರೂ ಒಂದು ಆಫೀಸಿನಲ್ಲಿ ಕೆಲಸ ಖಾಲಿ ಇಲ್ಲ ಎಂದು ತಿಳಿಸಿದರೆ, ಮಾರನೆ ದಿನ ಮತ್ತೆ ಹೋಗಿ ವಿಚಾರ ಮಾಡುತ್ತಾನೆ: 'ಇಂದು ಯಾವುದಾದರೂ ಖಾಲಿ ಬಿದ್ದಿರುವುದೆ?'

✸ ಸಾಧುಸಂಗದಿಂದ ಇನ್ನೊಂದು ಉಪಕಾರವಾಗುತ್ತದೆ. ಸದಸದ್ವಿಚಾರ ಬೆಳೆಯುತ್ತದೆ. ಭಗವಂತನೇ ಸತ್, ಎಂದರೆ ನಿತ್ಯ, ಈ ಜಗತ್ತು ಅಸತ್, ಎಂದರೆ ಅನಿತ್ಯ. ಅಸತ್ ಮಾರ್ಗಕ್ಕೆ ಮನಸ್ಸು ಕಾಲುಹಾಕಿತು ಎಂದೊಡನೆಯೇ ವಿಚಾರದಲ್ಲಿ ತೊಡಗಬೇಕಾಗುತ್ತದೆ. ಆನೆ ಬೇರೆಯವರ ತೋಟದಲ್ಲಿರುವ ಬಾಳೆ ಗಿಡಗಳ ಕಡೆ ನೋಡಿ ಸೊಂಡಿಲು ನೀಡಿತು ಎಂದರೆ, ಅದಕ್ಕೆ ಮಾವಟಿಗನ ಅಂಕುಶದೇಟು ಬೀಳುತ್ತದೆ.

✸ ಭಕ್ತ: ''ಮಹಾಶಯರೆ, ಸಂಸಾರದಲ್ಲಿದ್ದು ಭಗವಂತನ ಸಾಕ್ಷಾತ್ಕಾರ ಪಡೆಯಲು ಸಾಧ್ಯವೆ?''

ಶ್ರೀರಾಮಕೃಷ್ಣರು: ''ಖಂಡಿತ ಸಾಧ್ಯ. ಆದರೆ ನಾನು ತಿಳಿಸಿದ ಹಾಗೆ ಸಾಧುಸಂಗ ಸರ್ವದಾ ಪ್ರಾರ್ಥನೆ ಇವನ್ನೂ ಮಾಡುತ್ತಿರಬೇಕು. ಆತನಿಗಾಗಿ ಅಳಬೇಕು. ಮನಸ್ಸಿನ ಕಶ್ಮಲಗಳೆಲ್ಲ ತೊಳೆದುಹೋದ ಮೇಲೆ ಆತನ ದರ್ಶನ ದೊರೆಯುತ್ತದೆ. ಮನಸ್ಸು ಮಣ್ಣು ಹಿಡಿದ ಸೂಜಿಯ ಹಾಗೆ, ಭಗವಂತ ಚುಂಬಕದ ಹಾಗೆ. ಮಣ್ಣು ತೊಳೆದು ಹೋಗುವವರೆಗೆ ಸೂಜಿ ಚುಂಬಕದೊಡನೆ ಐಕ್ಯವಾಗಲಾರದು. ಅಳುತ್ತ ಅಳುತ್ತ ಸೂಜಿಯ ಮಣ್ಣು ತೊಳೆದು ಹೋಗುತ್ತದೆ. ಸೂಜಿಯ ಮಣ್ಣು ಎಂದರೆ, ಕಾಮ, ಕ್ರೋಧ, ಲೋಭ, ಪಾಪಬುದ್ಧಿ. ಮಣ್ಣು ತೊಳೆದು ಹೋದೊಡನೆಯೇ ಸೂಜಿಯನ್ನು ಚುಂಬಕ ಎಳೆದುಕೊಂಡುಬಿಡುತ್ತದೆ. ಎಂದರೆ ಭಗವಂತನ ದರ್ಶನ ದೊರೆಯುತ್ತದೆ. ಚಿತ್ತಶುದ್ಧಿಯಾಯಿತು ಎಂದರೆ, ಆತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ. ಜ್ವರ ಬಂದು ದೇಹದಲ್ಲಿ ನೀರು ಹೆಚ್ಚಿಬಿಟ್ಟಿದೆ. ಅದನ್ನು ಕಡಿಮೆಮಾಡದ ಮುನ್ನ ಕ್ವಿನೈನ್ ಕೊಟ್ಟರೆ ಏನಾದೀತು?''

✸ ಸಂಸಾರದಲ್ಲಿ ಭಗವಂತನ ಸಾಕ್ಷಾತ್ಕಾರ ಏಕೆ ಸಾಧ್ಯವಿಲ್ಲ? ನಾನು ತಿಳಿಸಿದ ಹಾಗೆ ಸಾಧುಸಂಗ, ಅಳುತ್ತ ಅಳುತ್ತ ಪ್ರಾರ್ಥನೆ, ಆಗಾಗ ನಿರ್ಜನವಾಸ ಇವನ್ನು ಮಾಡಬೇಕು. ಫುಟ್‌ಪಾತಿನಲ್ಲಿರುವ ಗಿಡಕ್ಕೆ ಬೇಲಿಹಾಕದೆ ಇದ್ದರೆ ಆಡು-ಕುರಿ, ದನಕರು ತಿಂದುಬಿಡುತ್ತವೆ. *(ಸಂ.೧, ಪು.೨೪-೨೬)*

✸ ಯಾವಾಗಲೂ ಸಾಧುಸಂಗ ಇದ್ದೇ ಇರಬೇಕು. ಸಾಧು ಭಗವಂತನ ಪರಿಚಯ ಮಾಡಿಕೊಟ್ಟುಬಿಡುತ್ತಾನೆ. *(ಸಂ.೧, ಪು.೧೫೧)*

✸ ಹಿಮಾಲಯಪರ್ವತರಾಜನ ಮನೆಯಲ್ಲಿ ಭಗವತಿ ಜನ್ಮತಳೆದಾಗ ಆಕೆ ಅನೇಕ ರೂಪಗಳನ್ನು ಧರಿಸಿ ತನ್ನ ತಂದೆಗೆ ದರ್ಶನ ಕೊಟ್ಟಳು. ರಾಜ ಆಕೆಗೆ ತಿಳಿಸಿದ: 'ನನಗೆ ಬ್ರಹ್ಮದರ್ಶನ ಪಡೆಯಲು ಇಚ್ಛೆಯಾಗುತ್ತಿದೆ.' ಅದಕ್ಕೆ ಭಗವತಿ ಹೇಳಿದಳು: 'ಹೇ ತಂದೆ, ನಿಮಗೆ ಆ ಇಚ್ಛೆಯುಂಟಾಗಿರುವುದಾದರೆ, ನೀವು ಸಾಧುಸಂಗ ಮಾಡಬೇಕು. ಸಂಸಾರವನ್ನು ಬಿಟ್ಟು ನಿರ್ಜನಪ್ರದೇಶದಲ್ಲಿದ್ದು ಆಗಾಗ ಸಾಧುಸಂಗ ಮಾಡಿ.' *(ಸಂ.೧, ಪು.೨೯೬)*

**ಶ್ರೀರಾಮಕೃಷ್ಣ ವಚನವೇದದಿಂದ**